ಫಾರೆಸ್ಟ್ಟ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 15ನೆ ಜೂ 1909.

ತೀರ್ಥಹಳ್ಳಿಯಲ್ಲಿರುವ ವೆಂಕಟಸುಬ್ಬಣ್ಣಾಚಾರ್ರ ವನೆ ಹಿತ್ತಲಲ್ಲಿ ಈ ಕೆಳಗೆ ಕಂಡ ಗಂಧದ ತುಂಡು ಸಿಕ್ಕಿರುತ್ತದೆ. ಇದಕ್ಕೆ ತರೀಕೆರೆ ಕೋರ್ಟ ಸೀಲ್ಡ ಸ್ಟ್ಯಾಂಪ್ಪು ಬಿದ್ದಿರುತ್ತೆ. ಇದರ ಮಾಲೀಕರು ಯಾರಾದರೂ ಇದ್ದಲ್ಲಿ ಈ ಲಾಗಾಯಿತು ಒಂದು ತಿಂಗಳು ಒಳಗಾಗಿ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟ್ಟ ಆಫಿಸರವರ ರೂಬುರೂಬು ಹಾಜರಾಗಿ ಅವರ ಹಕ್ಕನ್ನು ನಿರ್ಧರಪಡಿಸಿಕೊಟ್ಟು ಮಾಲು ತೆಗದುಕೊಂಡು ಹೋಗಬಹುದಾಗಿರುತ್ತೆ. ತಪ್ಪಿದಲ್ಲಿ ನಂತರ ಯಾವ ಹಕ್ಕೂ ಅಂಗೀಕರಿಸಲ್ಪಡಲಾರದು ಮತ್ತು ಮಾಲು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದು. ಇದರ ತೂಕ 41 ಪೌಂಡ್ ಇರುತ್ತೆ ಮತ್ತು ಇದು ತೀರ್ಥಹಳ್ಳಿ ಕೋರ್ಟ ಫಾರೆಸ್ಟರಲ್ಲಿ ಇಡಿಸಿರುತ್ತೆ. ಬೇಕಾದವರು ನೋಡಬಹುದು.

ನೋಟಿಫಿಕೇಷ್ಟ.

ತಾರೀಖು 15ನೆ ಜೂ 1909.

1900ನೆ ಮೈಸೂರು ಫಾರೆಸ್ಟ್ಟ ರೆಗ್ಯುಲೇಷ್ಟ 40ನೆ ಸೆಕ್ಷ್ಟ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಾಣಿಸಿರುವ ತಪಶೀಲ್‌ನಂತೆ ತ್ಯಾಗದ ಬೆಲಗುಗಳು ಚೆನ್ನಗಿರಿ ತಾಲ್ಲೂಕು ಕೆಂಚಾಪುರದ ಬಳಿ ಲಂಬಾಣಿ ಗಂಗನಾಯಕನೆಂಬುವನು ವ್ಯವಸಾಯ ಮಾಡಿದ ಹೊಲದಲ್ಲಿ ಸಿಕ್ಕಿದವು. ಇವುಗಳಿಗೆ ಹಕ್ಕು ಸ್ಥಾಪನೆ ಮಾಡತಕ್ಕವರು ಖುದ್ದಾಗಿ ಆಗಲೀ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ವಿಜಂಟರ ಮೂಲಕವಾಗಿ ಆಗಲಿ ಈ ನೋಟಿಫಿಕೇಷ್ಟ ತಾರೀಖು ಲಾಗಾಯಿತು ಒಂದು ತಿಂಗಳೊಳಗೆ ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟ್ಟ ಆಫಿಸರವರ ರೂಬುರೂಬು ಹಾಜರಾಗಿ ಅವರ ಹಕ್ಕನ್ನ ನಿರ್ಧರಪಡಿಸಿಕೊಳ್ಳಬೇಕು. ತಪ್ಪಿದರೆ ಸದರಿ ಬೆಲಗುಗಳನ್ನ ಸರಕಾರಕ್ಕೆ ಸೇರಿಸಿಕೊಂಡು ಹರಾಜು ಮಾಡಿಸಲಾಗುತ್ತೆ.

ನಂಬರು.	ಜಾತಿ.	ಲಾಂಬಿ.		ಸುತ್ತಳತೆ.		ಪರಾ.
		ಅಡಿ.	ಅಂಗಲ	ಅಡಿ.	ಅಂಗಲ.	
1	ಸಾಗುವಾನಿ ...	15	0	2	0	ಕೆಂಚಾಪುರದ ಪಟೇಲ್ ಮುರಗೆಪ್ಪನ ಬಳಿ ಇದೆ.
	ಡಿಟೋ ...	15	2	1	11	
	ಡಿಟೋ ..	13	9	1	11	

ಇಸ್ತಿಹಾರ್.

ತಾರೀಖು ಜೂ 1909.

ಸಕ 1909ನೆ ಇಸವಿ ಜೂ ಮಾಹೆ 17ನೆ ತಾರೀಖಿನ ಮೈಸೂರು ಗೆಜೆಟ್ಟಿನ IIನೆ ಭಾಗದ 509, 510ನೆ ಪುಟದಲ್ಲಿ ಫಾಯಿಷಾಗಿರುವ ಶಿವಮೊಗ್ಗ ಡಿಸ್ಟ್ರಿಕ್ಟಿನ ತಾಲ್ಲೂಕುಗಳಲ್ಲಿ ತಂಗಡಿ ಮತ್ತು ಕಕ್ಕೆ ಚಕ್ಕೆ 1909—10ನೆ ಸಾಲಿನಲ್ಲಿ ಜಮಾಯಿಸಿಕೊಳ್ಳುವ ಹಕ್ಕುದಾರಿ ಹರಾಜ್ ಹಾಕಲ್ಪಡುವ ವಿಷಯ ಫಾಯಿಷಾಗಿರುತ್ತೆ. ಈ ಸಂಗತಿ ಸಕಲರ ಗಮನಕ್ಕೂ ತಂದಿದೆ.

ಎ. ಪೊನ್ನಸಾಮಿ ಮೊದಲಿಯಾರ್,
ಡಿಸ್ಟ್ರಿಕ್ಟ್ ಫಾರೆಸ್ಟ್ಟ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್ಟ.

ಶಿವಮೊಗ್ಗ ಡಿಸ್ಟ್ರಿಕ್ಟ್ಟು.

ತಾರೀಖು 9ನೆ ಜೂ 1909.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ:—ಸಕ 1909ನೆ ಜುಲೈ ಒಂದನೆ ತಾರೀಖು ಲಾಗಾಯಿತು 1910ನೆ ಜೂ ಆಖೈರ್ ವರೆಗೆ ಶಿಕಾರಿಪುರ ಟವ್ನ ಮ್ಯುನಸಿಪಲ್ ಸರಹದ್ದಿನೊಳಗೆ ಪ್ರವೇಶಿಸುವ ಗಾಡಿ ವಗ್ಗೆರೆಗಳಮೇಲೆ ಟೋಲ್ ವಸೂಲ್ ಮಾಡತಕ್ಕ ಹಕ್ಕನ್ನು 1909ನೆ ಜೂ ಮಾಹೆ ತಾರೀಖು 23ನೆ ಮಧ್ಯಾಹ್ನದಲ್ಲಿ ಶಿಕಾರಿಪುರ ತಾಲ್ಲೂಕ್ ಕಛೇರಿಯಲ್ಲಿ ಅ ಮಲ್ಲಾರ್ ಮತ್ತು ಶಿಕಾರಿಪುರ ಟವ್ನ ಮ್ಯುನಸಿಪಲ್ ವೈಸ್ ಪ್ರೆಸಿಡೆಂಟರಿಂದ ಬಹಿರಂಗವಾಗಿ ಹರಾಜು ಹಾಕಿಸಲ್ಪಡುತ್ತೆ.

ಹೆಚ್ಚಿನ ಸಂಗತಿಗಳಿಗೆ ತಾರೀಖು 17ನೆ ಮಕ್ರುಂ ಮೈಸೂರು ಗೆಜೆಟ್ಟಿನ 2ನೆ ಭಾಗದ 512, 513ನೆ ಪೇಜಿನಲ್ಲಿ ಫಾಯಿಷ್ ಆಗಿರುವದನ್ನು ನೋಡಬೇಕು.

ಸೊರಬದ ತಾಲ್ಲೂಕು ಸೊರಬ–ಸಿದ್ದಾಪುರ ರೋಡಿನಲ್ಲಿ ಬಾಡದಬೈಲು ಬಳಿ ಏರ್ಪಡಿಸಲ್ಪಟ್ಟಿರುವ ಟೋಲ್ ಗೇಟಿನಲ್ಲಿ 1909ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1910ನೆ ಇಸವಿ ಜೂ ಆಖೈರು ವರಿಗೆ ಸುಂಕ ವಸೂಲ್ಮಾಡುವ ಹಕ್ಕನ್ನು ಡೆಪ್ಯುಟಿ ಕಮಿಷನರವರಿಂದಾಗಲೀ ಅಥವಾ ಅವರಿಂದ ಆ ಬಗ್ಗೆ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷನರವರಿಂದಾಗಲೀ ಸೊರಬ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಜೂ ತಾರೀಖು 28ನೆ ದಿನ ಬಹಿರಂಗವಾಗಿ ಹರಾಜು ಹಾಕಿಸಲ್ಪಡುವದು.